# ಎರಡನೆಯ ಸಂಕಲನಾತ್ಮಕ ಮೌಲ್ಯ ಮಾಪನ – ಮಾರ್ಚ್ 2020

**ಪ್ರಥಮ ಭಾಷೆ – ಕನ್ನಡ** | **ಗರಿಷ್ಠ ಅಂಕಗಳು : 40**

**8 ನೆಯ ತರಗತಿ** | **ಸಮಯ : 1 : 30**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ಷಮಾಕ್ಷರದೊಂದಿಗೆ ಬರೆಯಿರಿ.** **1X4=4**

1. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂನಗಳ ಸಂಖ್ಯೆ :

   ಎ) 49 ಬಿ) 9 ಸಿ) 13 ಡಿ) 10

2. ಒಂದೇ ಜಾತಿಯ ಎರಡು ವ್ಯಂಜನಗಳು ಒಟ್ಟಿಗೆ ಸೇರಿ ಆಗುವ ಸಂಯುಕ್ತಾಕ್ಷರವೇ :

   ಎ) ಮಿಶ್ರಜಾತಿ ಸಂಯುಕ್ತಾಕ್ಷರ ಬಿ) ಸಜಾತಿಯ ಸಂಯುಕ್ತಾಕ್ಷರ

   ಸಿ) ವಿಜಾತಿ ಸಂಯುಕ್ತಾಕ್ಷರ ಡಿ) ಆನ್ಯ ಜಾತಿ ಸಂಯುಕ್ತಾಕ್ಷರ

3. 'ಹುಲ್ಲುಗಾವಲು' ಪದವು ಈ ಸಂಧಿಗೆ ಉದಾಹರಣೆ

   ಎ) ಲೋಪ ಸಂಧಿ ಬಿ) ಆಗಮ ಸಂಧಿ ಸಿ) ಆದೇಶ ಸಂಧಿ ಡಿ) ಗುಣಸಂಧಿ

4. ಅಂಕಿತನಾಮಕ್ಕೆ ಉದಾಹರಣೆಯಾದ ಪದವಿದು.

   ಎ) ಮರ ಬಿ) ದೇಶ ಸಿ) ವಿದ್ವಾಂಸ ಡಿ) ಹಿಮಾಲಯ

**II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **5X1=5**

5. ದೊರೆಯ ಹೆಂಡತಿ ಹೂವಿಗೆ ಎಷ್ಟು ಹಣ ಕೊಟ್ಟಳು?
6. ಸಂಪ್ರದಾಯಕ್ಕೆ ವಿರುದ್ಧವಾದದ್ದು ಯಾವುದು?
7. ಯು. ಆರ್ ಅನಂತಮೂರ್ತಿಯವರ ಮನೆಗೆ ಕಾಫಿ ಬೀಜವನ್ನು ತಂದು ಕೊಡುತ್ತಿದ್ದವರು ಯಾರು?
8. ಶರಣರು ಕೆಡಿಸುವ ನಿದ್ದೆಯನ್ನು ಹೇಗೆ ಗೆದ್ದಿದ್ದಾರೆ?
9. ಯುವಕನು ರೈಲಿನಲ್ಲಿ ಸಿಕ್ಕಿದ ಮುದುಕನ ಮನೆಗೆ ಏಕೆ ಬಂದನು?

**III. ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **8X2=16**

10. ತಂಗಿ ಹೇಗೆ ಹೂವಿನ ಗಿಡವಾಗುತ್ತಿದ್ದಳು?
11. ರಾಜನನ್ನು ಪೀಠದಲ್ಲಿ ಕುಳ್ಳಿರಿಸಿ ಯಶೋಧರೆ ಏನೆಂದು ವಿನಂತಿಸುತ್ತಾಳೆ?
12. ಶ್ರೀಗುರುವು ಶಿಷ್ಯರಿಗೆ ಬುದ್ಧಿ ಕಲಿಸುವುದು ಕಾಲಕಟ್ಟಳೆಗೆ ಹೇಗೆ ಒಳಪಟ್ಟಿದೆ? ವಿವರಿಸಿ.
13. ಪುಲಿಗೆರೆ ಸೋಮನಾಥನವರು ಸುವ್ರತಿ ಹಾಗೂ ಸುತನ ಬಗೆಗೆ ಏನು ಹೇಳಿದ್ದಾರೆ?
14. ಶ್ರೀಪಾದರಾಜರು ಹೇಳಿರುವಂತೆ ಮುಕ್ತಿ ಪಡೆಯಲು ಹೇಗೆ ನಡೆದುಕೊಳ್ಳಬೇಕು?
15. ದೇವನು ತನ್ನ ಭಕ್ತರನ್ನು ಹೇಗೆ ರಕ್ಷಿಸಿದರೆಂದು ಗೋಪಾಲದಾಸರು ಹೇಳಿದ್ದಾರೆ?
16. ಬಾಪೂಜಿಯವರ ವ್ಯಕ್ತಿತ್ವದ ಬಗ್ಗೆ ನೆಹರೂರವರು ಏನು ಹೇಳಿದ್ದಾರೆ?

17. 'ಆಟೋರಿಕ್ಷಾದ ರಸಪ್ರಸಂಗಗಳು' ಲೇಖನದಲ್ಲಿ ನೀವು ಮೆಚ್ಚುವ ಪ್ರಸಂಗ ಯಾವುದು?

IV. **ಕೆಳಗಿನ ಕವಿ/ ಸಾಹಿತಿಯ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **1X3=3**

18. ಯು.ಆರ್. ಅನಂತಮೂರ್ತಿ

V. **ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳನ್ನು ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.** **1x3=3**

19. **"**ಇವರಿರಲಿ ಸೆರೆಯೊಳಗಾರು ತಿಂಗಳು**"**

**VI.** **ಈ ಕೆಳಗಿನ ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1x4=4**

20.'ಸಪ್ತಾಕ್ಷರಿ ಮಂತ್ರ' ಪಾಠದ ಕತೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಅಥವಾ**

ಮುದ್ದಣನಿಗೆ ಒಲಿದ ಮಂತ್ರದ ಬಗ್ಗೆ ಮುದ್ದಣನು ಮಾಡಿದ ಪರಿಹಾಸವೇನು? ಇದಕ್ಕೆ ಮನೋರಮೆಯ ಪ್ರತಿಕ್ರಿಯೆ ಏನು? ತಿಳಿಸಿ.

**VII.** ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದಕ್ಕೆ ಹದಿನೈದು ವಾಕ್ಯಗಳಲ್ಲಿ ಪ್ರಬಂಧ ಬರೆಯಿರಿ. **1x5=5**

21.ರಾಷ್ಟ್ರೀಯ ಹಬ್ಬಗಳ ಮಹತ್ವ

ಅಥವಾ

ನಾ ಮೆಚ್ಚಿದ ಸ್ಥಳ

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ– 2020
# ಮಾದರಿ ಉತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ಷಮಾಕ್ಷರದೊಂದಿಗೆ ಬರೆಯಿರಿ.** **1X4=4**

1. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂನಗಳ ಸಂಖ್ಯೆ :

ಎ) 49 ಬಿ) 9 ಸಿ) 13 ಡಿ) 10

**ಉತ್ತರ : ಬಿ) 9**

2. ಒಂದೇ ಜಾತಿಯ ಎರಡು ವ್ಯಂಜನಗಳು ಒಟ್ಟಿಗೆ ಸೇರಿ ಆಗುವ ಸಂಯುಕ್ತಾಕ್ಷರವೇ :

ಎ) ಮಿಶ್ರಜಾತಿ ಸಂಯುಕ್ತಾಕ್ಷರ ಬಿ) ಸಜಾತಿಯ ಸಂಯುಕ್ತಾಕ್ಷರ

ಸಿ) ವಿಜಾತಿ ಸಂಯುಕ್ತಾಕ್ಷರ ಡಿ) ಆನ್ಯ ಜಾತಿ ಸಂಯುಕ್ತಾಕ್ಷರ

**ಉತ್ತರ : ಬಿ) ಸಜಾತಿಯ ಸಂಯುಕ್ತಾಕ್ಷರ**

**3.** 'ಹುಲ್ಲುಗಾವಲು' ಪದವು ಈ ಸಂಧಿಗೆ ಉದಾಹರಣೆ

ಎ) ಲೋಪ ಸಂಧಿ ಬಿ) ಆಗಮ ಸಂಧಿ ಸಿ) ಆದೇಶ ಸಂಧಿ ಡಿ) ಗುಣಸಂಧಿ

**ಉತ್ತರ : ಸಿ) ಆದೇಶ ಸಂಧಿ**

4. ಅಂಕಿತನಾಮಕ್ಕೆ ಉದಾಹರಣೆಯಾದ ಪದವಿದು.

ಎ) ಮರ ಬಿ) ದೇಶ ಸಿ) ವಿದ್ವಾಂಸ ಡಿ) ಹಿಮಾಲಯ

**ಉತ್ತರ : ಡಿ) ಹಿಮಾಲಯ**

**II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **5X1=5**

5. ದೊರೆಯ ಹೆಂಡತಿ ಹೂವಿಗೆ ಎಷ್ಟು ಹಣ ಕೊಟ್ಟಳು?

**ಉತ್ತರ** : ದೊರೆಯ ಹೆಂಡತಿ ಹೂವಿಗಾಗಿ ಒಂದು **ಬೊಗಸೆ** ತುಂಬ ಹಣಕೊಟ್ಟಳು.

6. ಸಂಪ್ರದಾಯಕ್ಕೆ ವಿರುದ್ಧವಾದದ್ದು ಯಾವುದು?

**ಉತ್ತರ** : ಸನ್ಯಾಸಿಯಾದವನು ಸತಿಯನ್ನು ನೋಡುವುದು, ಮಾತನಾಡುವುದು ಸಂಪ್ರದಾಯಕ್ಕೆ ವಿರೋಧವಾದದ್ದು.

7. ಯು. ಆರ್ ಅನಂತಮೂರ್ತಿಯವರ ಮನೆಗೆ ಕಾಫಿ ಬೀಜವನ್ನು ತಂದು ಕೊಡುತ್ತಿದ್ದವರು ಯಾರು?

**ಉತ್ತರ** : ಬ್ಯಾರಿಯೊಬ್ಬರು ತಿಂಗಳಿಗೊಮ್ಮೆ ಕಾಫಿ ಬೀಜವನ್ನು ಯು. ಆರ್ ಅನಂತಮೂರ್ತಿಯವರ ಮನೆಗೆ ತಂದು ಕೊಡುತ್ತಿದ್ದರು.

8. ಶರಣರು ಕೆಡಿಸುವ ನಿದ್ದೆಯನ್ನು ಹೇಗೆ ಗೆದ್ದಿದ್ದಾರೆ?

**ಉತ್ತರ** : ಶರಣರು ಕೆಡಿಸುವ ನಿದ್ದೆಯನ್ನು **ಯೋಗ ಸಮಾಧಿಯನ್ನು ಮಾಡಿ** ಗೆದ್ದಿದ್ದಾರೆ.

9. ಯುವಕನು ರೈಲಿನಲ್ಲಿ ಸಿಕ್ಕಿದ ಮುದುಕನ ಮನೆಗೆ ಏಕೆ ಬಂದನು?

**ಉತ್ತರ** : ಯುವಕನು ರೈಲಿನಲ್ಲಿ ಸಿಕ್ಕಿದ ಮುದುಕನ ಮಗಳು ಮತ್ತು ಸೊಸೆಗೆ ಪಾಠ ಹೇಳಿಕೊಡುವ ಕೆಲಸಕ್ಕಾಗಿ ಮುದುಕನ ಮನೆಗೆ ಬಂದನು.

**III.** **ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **8X2=16**

10. ತಂಗಿ ಹೇಗೆ ಹೂವಿನ ಗಿಡವಾಗುತ್ತಿದ್ದಳು?

**ಉತ್ತರ :** ಹುಡುಗಿ ಹೂವಿನ ಗಿಡವಾಗುವ ಸ್ಥಳವನ್ನು ಮೊದಲು ಸಾರಿಸಿ, ಸ್ನಾನಮಾಡಿದ, ನಂತರ ತಂಗಿ ದೇವರ ಧ್ಯಾನ ಮಾಡುತ್ತಾ ಕುಳಿತುಕೊಳ್ಳುವಳು. ಅಕ್ಕ, ಅವಳ ಮೇಲೆ ಚಿಳ್ಉಗುರು ಸೋಕದ ಹಾಗೆ ಎರಡು ತಂಬಿಗೆ ನೀರನ್ನು ಸುರಿಯುವಳು. ಆಗ ತಂಗಿ ಘಮ ಘಮಿಸುವ ಹೂವಿನ ಗಿಡವಾಗುತ್ತಿದ್ದಳು. ಅಕ್ಕ, ಜೋಪಾನವಾಗಿ ಬೇಕಾದಷ್ಟು ಹೂ ಬಿಡಿಸಿದ ನಂತರ ಒಂದು ತಂದಿಗೆ ನೀರು ಸುರಿಯುವಳು. ಆಗ ತಂಗಿ ಮತ್ತೆ ಮನುಷ್ಯಳಾಗುತ್ತಿದ್ದಳು.ಹೀಗೆ ತಂಗಿ ಹೂವಿನ ಗಿಡವಾಗುತ್ತಿದ್ದಳು.

11. ರಾಜನನ್ನು ಪೀಠದಲ್ಲಿ ಕುಳ್ಳಿರಿಸಿ ಯಶೋಧರೆ ಏನೆಂದು ವಿನಂತಿಸುತ್ತಾಳೆ?

**ಉತ್ತರ :** ರಾಜನನ್ನು ಪೀಠದಲ್ಲಿ ಕುಳ್ಳಿರಿಸಿ ಯಶೋಧರೆ **"ಬಹಳ ದಿನಗಳಿಂದ ಬೇಡುತ್ತಿದ್ದೇನೆ. ನಿಮ್ಮ ಸೋದರಿಯ ಮಗಳೆಂದು ಬಾಲ್ಯದಲ್ಲಿಯೇ ನನ್ನ ಕರೆದುಕೊಂಡು ಬಂದು ಸುಖವಾಗಿ ಬೆಳೆಸಿದ್ದೀರಿ, ಮನೆಯ ಸೊಸೆಯಾಗಿ ಮಾಡಿಕೊಂಡಿದ್ದೀರಾ, ನನ್ನ ಬಾಳನ್ನು ಬೆಳಗಿಸಿದ್ದೀರ, ನಾನು ಕನಸ್ಸಿನಲ್ಲೂ ಕಾಣದ ಸುಖವನ್ನು ಅನುಭವಿಸುವಂತೆ ಮಾಡಿದ್ದಿರ. ನಿಮ್ಮ ಐಶ್ವರ್ಯದಲ್ಲಿ ಸ್ವಲ್ಪವೂ ಇಲ್ಲ ಅನ್ನದೇ ಎಲ್ಲವನ್ನೂ ಕೊಟ್ಟಿದ್ದೀರ. ಈಗ ಮತ್ತೋಮ್ಮೆ ನನ್ನ ಪತಿಯನ್ನು ಕೊಟ್ಟು ನನ್ನ ರಕ್ಷಿಸಿರಿ"** ಎಂದು ವಿನಂತಿಸುತ್ತಾಳೆ.

12. ಶ್ರೀಗುರುವು ಶಿಷ್ಯರಿಗೆ ಬುದ್ಧಿ ಕಲಿಸುವುದು ಕಾಲಕಟ್ಟಳೆಗೆ ಹೇಗೆ ಒಳಪಟ್ಟಿದೆ? ವಿವರಿಸಿ.

**ಉತ್ತರ :** ಅಲ್ಲಮಪ್ರಭು ಅವರು ತಮ್ಮ ವಚನದಲ್ಲಿ ಶ್ರೀಗುರು ಯಾವ ಯಾವ ಕಾಲದಲ್ಲಿ ಯಾವ ಯಾವ ರೀತಿ ಶಿಷ್ಯನಿಗೆ ಬುದ್ಧಯನ್ನು ಕಲಿಸಬೇಕು ಎಂದಿದ್ದಾರೆ. ಕೃತಯುಗದಲ್ಲಿ ಶ್ರೀಗುರುವು ಶಿಷ್ಯನಿಗೆ ಬಡಿದು ಬುದ್ಧಯನ್ನು ಕಲಿಸುತ್ತಿದ್ದನು. ತ್ರೇತಾಯುಗದಲ್ಲಿ ಶ್ರೀಗುರುವು ಶಿಷ್ಯನಿಗೆ ಬೈದು ಬುದ್ಧಿಯನ್ನು ಕಲಿಸುತ್ತಿದ್ದನು. ದ್ವಾಪರಯುಗದಲ್ಲಿ ಶ್ರಿಗುರುವು ಶಿಷ್ಯನಿಗೆ ಝುಂಕಿಸಿ ಬುದ್ಧಿಯನ್ನು ಕಲಿಸುತ್ತಿದ್ದನು. ಆದರೆ ಕಲಿಯುಗದಲ್ಲಿ ಶ್ರೀಗುರು ತನ್ನ ಶಿಷ್ಯನಿಗೆ ವಂದಿಸಿ ಬುದ್ದಿಯನ್ನು ಕಲಿಸಬೇಕಾಗಿದೆ. ಈ ರೀತಿ ಗುರುವು ಶಿಷ್ಯನಿಗೆ ಬುದ್ದಿಯನ್ನು ಕಲಿಸುವುದು ಕಾಲಕಟ್ಟಳೆಗೆ ಒಲಪಟ್ಟಿದೆ.

13. ಪುಲಿಗೆರೆ ಸೋಮನಾಥನವರು ಸುವ್ರತಿ ಹಾಗೂ ಸುತನ ಬಗೆಗೆ ಏನು ಹೇಳಿದ್ದಾರೆ?

**ಉತ್ತರ :** ವೇದಮಾರ್ಗವನ್ನು ಬಿಡದೆ ನಡೆಯುವವನು ಋಷಿ, ವೇದಗಳನ್ನು ಬಿಡದೆ ಪಠಸುತ್ತಾ ಪಾಲನೆ ಮಾಡುವವನೇ ಸುವ್ರತಿ. ಒಳ್ಳೆಯ ವಿದ್ಯೆಯೇ ಪುಣ್ಯವನ್ನು ಕೊಡುವುದು. ಮಗನೇ ಸದ್ಗತಿಗೆ ಕಾರಣನು ಎಂದು ಪುಲಿಗೆರೆ ಸೋಮಾಥನವರು ಹೇಳಿದ್ದಾರೆ.

14. ಶ್ರೀಪಾದರಾಜರು ಹೇಳಿರುವಂತೆ ಮುಕ್ತಿ ಪಡೆಯಲು ಹೇಗೆ ನಡೆದುಕೊಳ್ಳಬೇಕು?

**ಉತ್ತರ :** ಭಕ್ತಿ ಬೇಕು ವಿರಕ್ತಿ ಬೇಕು ಸರ್ವ ಶಕ್ತಿ ಬೇಕು ಮುಂದೆ ಮುಕ್ತಿಯ ಬಯಸುವಗೆ ಅಂದರೆ ಮಾನವನು ಮುಕ್ತಿಯನ್ನು ಪಡೆಯಲು ದೇವರಲ್ಲಿ ಭಕ್ತಿ ಇರಬೇಕು. ಮನೆ ಮಕ್ಕಳು ಎಂಬ ವ್ಯಾಮೋಹವನ್ನು ತೊರೆದು, ಸುಖ ಭೋಗಗಳ ಬಗ್ಗೆ ವೈರಾಗ್ಯವುಳ್ಳವನಾಗಿರಬೇಕು. ದೈಹಿಕ, ಮಾನಸಿಕ, ಆಧ್ಯಾತ್ಮಿಕ, ನೈತಿಕ ಶಕ್ತಿಗಳನ್ನು ಪಡೆದುಕೊಂಡು ಇರಬೇಕು ಎಂದು ಶ್ರೀ ಪಾದರಾಜರು ಹೇಳಿದ್ದಾರೆ.

15. ದೇವನು ತನ್ನ ಭಕ್ತರನ್ನು ಹೇಗೆ ರಕ್ಷಿಸಿದರೆಂದು ಗೋಪಾಲದಾಸರು ಹೇಳಿದ್ದಾರೆ?

**ಉತ್ತರ :** ನಮ್ಮ ದೇವನು ಪ್ರೀತಿಯಿಂದಲಿ ಸ್ಮರಿಸುವವರ ಪಾತಕಗಳ ಪರಿಹರಿಪನು. ಅಕ್ರೂರನನ್ನು ಪ್ರೀತಿಯಿಂದ ಸಲುಹಿದನು. ತನ್ನ ಶಂಖವನ್ನು ಪ್ರಯೋಗಿಸಿ ಗಜೇಂದ್ರನನ್ನು ಮೊಸಳೆಯ ಬಾಧೆಯಿಂದ ಕಾಪಾಡಿದನು. ಅಜಮಿಳನು ಭಕ್ತಿಯಿಂದ 'ನಾರಾಯಣ' ಎಂದು ಕರೆದಾಗ ಬಂದು ಸಲುಹಿದನು. ಹೀಗೆ ದೇವನು ತನ್ನ ಭಕ್ತರು ಪ್ರೀತಿಯಿಂದ ಕರೆದಾಗ ಬಂದು ರಕ್ಷಿಸುವವನು ಎಂದು ಗೋಪಾಲದಾಸರು ಹೇಳಿದ್ದಾರೆ.

16. ಬಾಪೂಜಿಯವರ ವ್ಯಕ್ತಿತ್ವದ ಬಗ್ಗೆ ನೆಹರೂರವರು ಏನು ಹೇಳಿದ್ದಾರೆ?

**ಉತ್ತರ :** ಭಾರತದಲ್ಲಿ ಮತ್ತೊಬ್ಬ ಮಹಾನಾಯಕ ಬಂದ; ಕಷ್ಟನಿಷ್ಠುರಗಳಿಗೆ ಸಿಕ್ಕಿದವರೆಂದರೆ ಆತನ ಪ್ರೇಮ ಅಪಾರ; ಅವರಿಗೆ ಸಹಾಯಮಾಡಲು ಉಗ್ರ ಆವೇಶದ ಆತುರ ಅವನಿಗೆ. ಆತ ನಮ್ಮ ಜನರಿಗೆಲ್ಲ ಮಹಾತ್ಕಾರ್ಯ ಸಾಧನೆಮಾಡಲೂ, ಗಂಭೀರ ಬಲಿದಾನಮಾಡಲು ಸ್ಫೂರ್ತಿಕೊಡುತ್ತಿದ್ದಾನೆ, ಬಲಿದಾನಮಾಡಿ ನಾವು ಸ್ವಾತಂತ್ರ್ಯಪಡೆಯಬೇಕು, ಹಸಿವಿನಿಂದ ಕೊರಗುತ್ತಿರುವವರು, ಬಡವರು, ಅನ್ಯಾಯಕ್ಕೆ ತುತ್ತಾದವರೇ ಮೊದಲಾದವರ ದುಃಖದ ಭಾರವಿಳಿಸಬೇಕು; ಇದು ಆತನಾಸೆ. ಎಂದು ಬಾಪೂಜಿಯವರ ವ್ಯಕ್ತಿತ್ವದ ಬಗ್ಗೆ ನೆಹರೂರವರು ಈ ರೀತಿ ಹೇಳಿದ್ದಾರೆ.

17. 'ಆಟೋರಿಕ್ಷಾದ ರಸಪ್ರಸಂಗಗಳು' ಲೇಖನದಲ್ಲಿ ನೀವು ಮೆಚ್ಚುವ ಪ್ರಸಂಗ ಯಾವುದು?

**ಉತ್ತರ** : ಒಂದು ಸಂಜೆ ಜಯನಗರದಲ್ಲಿರುವ ನ್ಯಾಷನಲ್ ಕಾಲೇಜಿನಲ್ಲಿ ಒಂದು ಕಾರ್ಯಕ್ರಮವಿತ್ತು. ಅದು ಮುಗಿಯುವುದು ರಾತ್ರಿ 10 ಘಂಟೆಯಾಯಿತು. ಆಟೋಗಾಗಿ ಕಾಲೇಜಿನ ಹತ್ತಿರ ಅಲ್ಲಿಯ ಕೆಲವು ಉಪಾಧ್ಯಾಯರೊಂದಿಗೆ ಕಾದು ನಿಂತಿದ್ದೆ. **"ಇಷ್ಟು ಹೊತ್ತಿನಲ್ಲಿ ಹಾಸ್ಟೆಲ್‌ನಲ್ಲಿ ಊಟ ಇರುವುದಿಲ್ಲ; ಆದುದರಿಂದ ನಮ್ಮ ಮನೆಗೆ ಬಂದು ಊಟಮಾಡಿಕೊಂಡು ಹೋಗಿ"** ಎಂದು ಒಬ್ಬಿಬ್ಬ ಉಪಾಧ್ಯಾಯರು ಒತ್ತಾಯಪಡಿಸುತ್ತಿದ್ದರು. "ಪರವಾಗಿಲ್ಲ, ಒಂದು ಹೊತ್ತು ಊಟ ಇಲ್ಲದೇ ಇದ್ದರೆ ಚಿಂತೆ ಇಲ್ಲ. ತುಂಬಾ ಹೊತ್ತಾಗಿದೆ" ಎಂದು ಹೇಳಿ ಅಲ್ಲಿಂದ ಹೊರಟೆ. ಆಟೋ ಚಾಲಕರು ಸ್ವಲ್ಪ ವಯಸ್ಸಾದವರು. ಇದೆನ್ನೆಲ್ಲಾ ಸಾವಧಾನವಾಗಿ ಕೇಳುತ್ತಿದ್ದರು. **'ಯಾಕೆ ಸಾರ್, ನಿಮಗೆ ಮನೆ ಇಲ್ಲವೇ? ಊಟ ಇಲ್ಲದೇ ಇದ್ದರೂ ಪರವಾಗಿಲ್ಲ ಅಂತ ಹೇಳುತ್ತಿದ್ದೀರಿ"** ಎಂದು ಕೇಳಿದರು. "ಇಲ್ಲಪ್ಪ, ನನಗೆ ಮನೆ-ಗಿನೆ ಇಲ್ಲ, ನ್ಯಾಷನಲ್ ಕಾಲೇಜ್ ಹಾಸ್ಟೆಲಿನಲ್ಲಿದ್ದೇನೆ" ಅಂದೆ. "ಇಷ್ಟು ಹೊತ್ತಿನಲ್ಲಿ ಉಪವಾಸ ಮಲಗಿಕೊಳ್ಳಬಾರದು ಸಾರ್. ವಿಶ್ವೇಶ್ವರಪುರದಲ್ಲಿರುವ ಸಜ್ಜನರಾವ್ ಸರ್ಕಲ್‌ಗೆ ಹೋಗೋಣ ಬನ್ನಿ. ಅಲ್ಲಿ ಇಡ್ಲಿ ಮಾರುತ್ತಾರೆ. ನೀವು ಇಡ್ಲಿ ತಿನ್ನುವ ತನಕ ಕಾಯುತ್ತೇನೆ" ಎಂದು ತುಂಬಾ ಆತ್ಮೀಯವಾಗಿ ವಿನಂತಿಸಿಕೊಂಡ. **"ತುಂಬಾ ಥ್ಯಾಂಕ್ಸ್, ನಿಮ್ಮಂತಹವರು ಬಹಳ ಅಪರೂಪ. ಆಟೋದವರಿಗೆ ಮಾನವೀಯತೆ ಇಲ್ಲ ಎಂದು ಹೇಳುತ್ತಾರೆ. ನೀವು ಅದಕ್ಕೆ ಅಪವಾದ"** ಎಂದು ಲೇಖಕರು ವಂದಿಸಿದರು ಈ ಪ್ರಸಂಗವನ್ನು ನಾನು ಮೆಚ್ಚುತ್ತೇನೆ.

**IV. ಕೆಳಗಿನ ಕವಿ/ ಸಾಹಿತಿಯ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ/ ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **1X3=3**

**18. ಯು.ಆರ್. ಅನಂತಮೂರ್ತಿ**

ಕನ್ನಡ ಸಾಹಿತ್ಯದ ಪ್ರಮುಖ ಸಾಹಿತಿಗಳು, ಚಿಂತಕರು ಹಾಗೂ ವಿಮರ್ಶಕರೆಂದು ಪ್ರಖ್ಯಾತರಾದವರು ಡಾ|| ಯು.ಆರ್. ಅನಂತಮೂರ್ತಿಯವರು ಇವರ ಪೂರ್ಣ ಹೆಸರು ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ. ಇವರ ಕಾಲ ಕ್ರಿ.ಶ. 1932–2014. ಶಿವಮೊಗ್ಗ ಜಿಲ್ಲೆಯ **ತೀರ್ಥಹಳ್ಳಿ ತಾಲೂಕಿನ ಮೇಳಿಗೆ** ಗ್ರಾಮದಲ್ಲಿ ಜನಿಸಿದರು.

ಇವರ ಪ್ರಮುಖ ಕೃತಿಗಳು **ಸಂಸ್ಕಾರ, ಭವ, ಅವಸ್ಥೆ, ಭಾರತೀಪುರ** ಮುಂತಾದ ಕಾದಂಬರಿಗಳು, ಆವಾಹನೆ (ನಾಟಕ) ಮೌನಿ, ಪ್ರಶ್ನೆ, ಎಂದೆಂದೂ ಮುಗಿಯದ ಕಥೆ – ಕಥಾ ಸಂಕಲನಗಳು, ಮಿಥುನ, ಅಜ್ಜನ ಹೆಗಲ ಸುಕ್ಕುಗಳು ಮುಂತಾದ ಕವನಸಂಕಲನಗಳು ಹೀಗೆ ವಿವಿಧ ಸಾಹಿತ್ಯ ಪ್ರಕಾರದಲ್ಲಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಗೌರವ ಡಿ.ಲಿಟ್. **ರಾಜ್ಯೋತ್ಸವ ಪ್ರಶಸ್ತಿ, ಭಾರತ ಸರ್ಕಾರದ ಪದ್ಮಭೂಷಣ ಪುರಸ್ಕಾರ, 1994ರಲ್ಲಿ 'ಭಾರತೀಯ ಜ್ಞಾನಪೀಠ ಪ್ರಶಸ್ತಿ'** ಪುರಸ್ಕಾರಗಳು ಲಭಿಸಿವೆ. 2002ರಲ್ಲಿ ತುಮಕೂರಿನಲ್ಲಿ ನಡೆದ 66ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**V. ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳನ್ನು ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.** **1x3=3**

19. "ಇವರಿರಲಿ ಸೆರೆಯೊಳಗಾರು ತಿಂಗಳು"

**ಆಯ್ಕೆ :** ಈ ವಾಕ್ಯವನ್ನು **ಶ್ರೀಕನಕದಾಸರು** ರಚಿಸಿರುವ **'ರಾಮಧಾನ್ಯ ಚರಿತೆ'** ಎಂಬ ಕೃತಿಯಿಂದ ಆಯ್ದ **'ರಾಮಧಾನ್ಯ ಚರಿತೆ'** ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

**ಸಂದರ್ಭ : "ಪರಮಧ್ಯಾನದಲ್ಲಿ ಇವರು ಇಬ್ಬರೇ ಸೆರೆಮನೆಯೊಳಗೆ ಆರು ತಿಂಗಳು ಇರಲಿ. ಹಿರಿದು ಕಿರಿದು ಎಂಬ ಇವರ ಪೌರುಷವನ್ನು ಅರಿಯಬಹುದು.** ಎಂದು ಹೇಳಿದ ಸಂದರ್ಭದಲ್ಲಿ ಶ್ರೀರಾಮನು ಈ ಮಾತನ್ನು ಹೇಳಿದ್ದಾನೆ.

**ಸ್ವಾರಸ್ಯ :** ರಾಗಿ ಮತ್ತು ಭತ್ತದಲ್ಲಿ ಯಾರು ಶ್ರೇಷ್ಠ ಎಂಬುದನ್ನು ತಿಳಿದುಕೊಳ್ಳಲು ಶ್ರೀರಾಮನು ಅವರನ್ನು ಆರು ತಿಂಗಳು ಸೆರೆಮನೆಯಲ್ಲಿಟ್ಟು ಪರೀಕ್ಷಿಸುವ ತೀರ್ಮಾನ ಸ್ವಾರಸ್ಯಕರವಾಗಿದೆ.

**VI. ಈ ಕೆಳಗಿನ ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1x4=4**

20. 'ಸಪ್ತಾಕ್ಷರಿ ಮಂತ್ರ' ಪಾಠದ ಕತೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಅಥವಾ**

ಮುದ್ದಣನಿಗೆ ಒಲಿದ ಮಂತ್ರದ ಬಗ್ಗೆ ಮುದ್ದಣನು ಮಾಡಿದ ಪರಿಹಾಸವೇನು? ಇದಕ್ಕೆ ಮನೋರಮೆಯ ಪ್ರತಿಕ್ರಿಯೆ ಏನು? ತಿಳಿಸಿ.

ಮುದ್ದಣನವರು ಬರೆದಿರುವ 'ಸಪ್ತಾಕ್ಷರಿ ಮಂತ್ರ' ಪಾಠದಲ್ಲಿ ಮುದ್ದಣ ಮತ್ತು ಮನೋರಮೆಯರ ಸಂಭಾಷಣೆ ಬರುತ್ತದೆ. ಈ ರೀತಿ ಬಂದು ಒದಗಿದ ಚಳಿಗಾಲದಲ್ಲಿ ರಘು ವಂಶದ ದೊರೆಯಾದ ಶ್ರೀರಾಮನ ಯಜ್ಞದ ಕುದುರೆಯು ಅರಣ್ಯಕ ಎಂಬ ಸಂನ್ಯಾಸಿಯ ಪುಣ್ಯಾಶ್ರಮಕ್ಕೆ ಹೋಗುತ್ತಿರುವುದನ್ನು ಕಂಡು ಶತ್ರುಘ್ನ ಮೊದಲಾದವರು ಮುನಿಯ ದರ್ಶನಕ್ಕೆ ಎಂದು ಒಳಗೆ ಹೋಗಿ ಮುನಿಗೆ ನಮಸ್ಕರಿಸಿದರು. ಆಗ ಅರಣ್ಯಕನು ಆಕಸ್ಮಿಕವಾಗಿ ಬಂದವರನ್ನು ಗೌರವಿಸಿ, ಎಲ್ಲರನ್ನೂ ಊಟ ಉಪಚಾರದಿಂದ ಸತ್ಕರಿಸಿ ಶ್ರೀರಾಮ ಸತ್ಕಥಾ ವಿನೋದ ಗೋಷ್ಠಿಯಲ್ಲಿ. ಆಗ ಮನೋರಮೆಯು **'ನನ್ನ ಸುಂದರ, ಅತಿಥಿ ಸತ್ಕಾರ ಎಂದರೆ ಏನು? ಬಾಯಿ ಮಾತಿನ ಉಪಚಾರವೇ? ಎಂದು ಕೇಳುತ್ತಾಳೆ. ಇದಕ್ಕೆ ಮುದ್ದಣ 'ಅಲ್ಲಲ್ಲ, ಬಾಯಿಯ ಉಪಚಾರ ಅಲ್ಲ, ಬಂದವರಿಗೆ ಕೈಗೆ, ಕಾಲುಗಳಿಗೆ ನೀರನ್ನು ಕೊಟ್ಟು ಕುಳ್ಳಿರಿಸಿ, ಸವಿಯಾದ ಊಟವನ್ನು ನೀಡಿ, ಹೂವಿನಿಂದ ಶೃಂಗರಿಸಿ, ಶ್ರೀಗಂಧದಿಂದ ಸಂತಸದಿಂದ ಸಿಂಪಡಿಸಿ, ಜತೆಯಲ್ಲಿ ನುಡಿದು ನಡೆದು ಗೌರವಿಸುವುದು.**

ಅಂತೆಯೇ ಶತ್ರುಘ್ನನ ಸಾವಿರ ಸಾವಿರ ಲೆಕ್ಕದಿಂದ ದೊಡ್ಡ ಸೈನ್ಯಕ್ಕೆ ಅರಣ್ಯಕನು ಊಟ, ನೀರನ್ನು ಕೊಟ್ಟು ಸನ್ಮಾನ ಮಾಡಿದನೆ. ಎಂದು ಸಂಶಯವನ್ನು ವ್ಯಕ್ತ ಪಡಿಸಿದಾಗ ಮುದ್ದಣನು ಅಹುದಹುದು ಅವರೆಲ್ಲರನ್ನು ಯಥೇಚ್ಚವಾದ ಮೃಷ್ಟಾನ ಭೋಜನದಿಂದ ತೃಪ್ತಿಪಡಿಸಿದರು. ಎಂದು ಹೇಳಿದಾಗ ನನಗೆ ಇದು ಆಶ್ಚರ್ಯ ಇದು ಹೇಗೆ ಸಾಧ್ಯವಾಯಿತು? ಏನು ಮುನಿಗಳ ಒಂದು ಜಪದ ತಪದ ಮಂತ್ರದ ಶಕ್ತಿಯೇನು ಕಡಿಮೆಯೇ ಬೇಡಿದ ಪದಾರ್ಥವನ್ನು ತಕ್ಷಣವೇ ತಂದು ಕೊಡುವುದು. ಎಂದು ಮುದ್ದಣನು ಹೇಳಿದಾಗ ಮನೋರಮೆ ಅಹುದೇನು, ಇಷ್ಟು ಮಹತ್ವ, ಶಕ್ತಿ ಇರುವ ಮಂತ್ರ ಯಾವುದು? ಎಂದು ಪ್ರಶ್ನಿಸುತ್ತಾಳೆ. ಯಾವುದು ಅಂದರೆ ಏನು! **ಏಕಾಕ್ಷರಿ, ( ಒಂದು ಅಕ್ಷರದ ಮಂತ್ರ 'ಓಂ') ದ್ವಕ್ಷರೀ,( ಎರಡು ಅಕ್ಷರದ ಮಂತ್ರ ' ಶಿವ' ) ತ್ರ್ಯಕ್ಷರೀ,( ಮೂರು ಅಕ್ಷರದ ಮಂತ್ರ 'ಶ್ರೀ ರಸ್ತು' ) ಚತುರಾಕ್ಷರೀ,( ನಾಲ್ಕು ಅಕ್ಷರದ ಮಂತ್ರ 'ಶುಭಮಸ್ತು' ) ಪಂಚಾಕ್ಷರೀ( ಐದು ಅಕ್ಷರದ ಮಂತ್ರ 'ನಮ: ಶಿವಾಯ' ) ಸಪ್ತಾಕ್ಷಕರಿ ( ಏಳು ಅಕ್ಷರದ ಮಂತ್ರ 'ಭವತಿ ಭಿಕ್ಷಾಂ ದೇಹಿ' )** ಮೊದಲಾದ ಪ್ರಸಿದ್ಧ ಮಂತ್ರಗಳು ಇರುವುವು ಅಲ್ಲವೇ? ಓ! ಇಷ್ಟು ಒಂದು ಜಪದ ಶಕ್ತಿ ಇರುವುದರಿಂದ ಬೇರೆ ತೊಂದರೆಯಿಲ್ಲದೆ ತಪಸ್ವಿಗಳು ಇರುವುದು. ಎಂದು ಮನೋರಮೆ ಹೇಳುತ್ತಾಳೆ. ಅಪ್ಪುದಪ್ಪುದು ಇದರಲ್ಲಿ ತಪ್ಪೇನು?

ಅದು ಹಾಗಿರಲಿ ನಿನ್ನಂತಹ ಕವಿಗಳು ಮನೆಯ ನಿರ್ವಹಣೆಯಲ್ಲಿ ಇಷ್ಟೊಂದು ತೊಂದರೆ ಪಡದೆ ಸುಮ್ಮಸುಮ್ಮನೆ ಹಾಳುಕತೆಯ ಕಾವ್ಯ ರಚನೆಯಲ್ಲಿ ಏಕೆ? ಮುಳುಗಿ ಭ್ರಾಂತಿಗೊಂಡಿರುವರೋ ಅವರಿಗೇನು ದಾರಿಯೋ ಊಟಕ್ಕೇನು ತಿನ್ನುವುದಕ್ಕೇನು ಆ ರೀತಿಯ ಒಂದು ಜಪವನ್ನು ಹಿರಿಯ ತಪಸಿಗಳ ದೆಸೆಯಿಂದ ಉಪದೇಶ ಪಡೆದುಕೊಂಡರಾಗದೇ. ಎಂದು ಮನೋರಮೆ ಕೇಳಿದಾಗ ಮುದ್ದಣನು ಮುಗುಳು ನಕ್ಕು ಏನು ನಮ್ಮವರ ಒಂದು ಇರುವಿಕೆ ನಗುವಾ ಆ ನಮ್ಮಂತಹ ಕವಿಗಳಿಗೇನು ಕೊರತೆಯೊ! ನಮ್ಮದೊಂದು ಮಾತಿನ ಶಕ್ತಿಯಿಂದ ಮೂರು

ಲೋಕಗಳನ್ನು ನಾಶ ಮಾಡುವ, ಹೊಗಳುವ, ತೆಗಳುವ, ವಶಪಡಿಸಿಕೊಳ್ಳುವ, ಆಳುವ, ಪಡೆಯುವ, ಮುಳುಗಿಸುವ, ಕಾವ್ಯ ರಚನೆ ಮಾಡುವ ನೆಮ್ಮದಿಯಾಗಿರುವ ಶೃಂಗಾರದ ಬಣ್ಣದ ಕವಿಗಳು ನಮ್ಮ ರೀತಿಯನ್ನು ಇನ್ನು ತಿಳಿದಿಲ್ಲ. ಮನೋರಮೆ ಆಶ್ಚರ್ಯಗೊಂಡು ನಿಮ್ಮಂತಹವರಿಗೆ ಹಾಗಾದರೆ ಮಂತ್ರವು ಸಿದ್ಧಸಿರುವುದೇ? ಎಂದು ಪ್ರಶ್ನಿಸುತ್ತಾಳೆ. ಆಗ ಮುದ್ದಣನು ಅನುಮಾನವೇಕೆ, ಭಯವೇಕೆ. ಆಗಾದರೆ ನಿನ್ನಲ್ಲಿಯೂ ಇರುವುದೇ? ಹೌದು ನನ್ನಲ್ಲಿ ಅಂತಹದು ಹಾಸುಹೊಕ್ಕಾಗಿರುವುದು. ಆ! ನೀನು ಬಹಳ ಮಹಿಮಾಶಾಲಿ. ನಿನಗೆ ಯಾರ ದೆಸೆಯಿಂದ ಎಂದು ಉಪದೇಶವು ಆಯಿತು? ಎಂದು ಪ್ರಶ್ನಿಸುತ್ತಾಳೆ. ಗುರುವಿನ ದೆಸೆಯಿಂದ ಬಾಲಕನಾಗಿದ್ದಾಗಲೇ ಎಂದು ಹೇಳುತ್ತಾನೆ. ನನ್ನ ಜೊತೆಗಾರನೇ ಅದು ಯಾವುದೋ ಮಂತ್ರವು ನನ್ನಲ್ಲಿ ಹೇಳು? ಎಂದು ಕೇಳುತ್ತಾಳೆ.

ಎಲೆ ಹೆಣ್ಣೆ ನೀನೂ ಯಾರಲ್ಲಿಯೂ, ಎಂದೆಂದಿಗೂ ಹೇಳಬಾರದು ಎಚ್ಚರಿಕೆ. ಎಂದಾಗ ಎಂದೂ ಯಾವ ರೀತಿಯಲ್ಲೂ ಹೇಳುವುದಿಲ್ಲ. ಹಾಗಾದರೆ ಆ ಮಂತ್ರ ಈ ರೀತಿಯಿದೆ ಕೇಳು ಭ...ವ..ಬೇರೆಯವರಲ್ಲಿ ಹೇಳುವುದಿಲ್ಲ ಎಂಬ ನಂಬಿಕೆಯನ್ನು ಕೊಡು. ಎಂದು ಕೇಳಿದಾಗ ಮನೋರಮೆ ಇದೆ ಹಿಡಿ ಭರವಸೆಯನ್ನು ನಿನ್ನಾಣೆ, ಕುಲದೇವದಾಣಿ ಎಂದೂ ಬೇರೆಯವರಲ್ಲಿ ಹೇಳುವುದಿಲ್ಲ. ಎಂದು ಭರವಸೆಯನ್ನು ಕೊಟ್ಟಾಗ ಮುದ್ದಣನು ಉಂ..ಭವತಿ...ಭಿ..ನೀನು ಯಾವ ರೀತಿಯಲ್ಲಿಯೂ, ಮರವಿನಲ್ಲೂ ಬೇರೆಯವರೊಡನೆ ಹೇಳಿ, ಗುಟ್ಟನ್ನು ಬಿಟ್ಟರೆ ನಮ್ಮಂತಹವರ ಬಾಳು ಹಾಳಾಗುವುದು. ಎಂದು ಎಚ್ಚರಿಕೆ ನೀಡುತ್ತಾನೆ. ಆಗ ಮನೋರಮೆ ನಾನೇನು ಬುದ್ಧಿಯಿಲ್ಲದವಳೇ, ಎಂದು ಹೇಳಿದಾಗ ಮುದ್ದಣನು ಗುಟ್ಟಿನಲ್ಲಿ **'ಭವತಿ ಭೀಕ್ಷಾಂ ದೇಹಿ' ಪೂಜ್ಯಳೇ ಭಿಕ್ಷೆ ಕೊಡು** ಎಂಬುದು ಇದುವೆ ಕವಿಗಳಿಗೆ ಸಿದ್ಧಿಸಿದ ಹೆಮ್ಮೆಯ ಏಳು ಅಕ್ಷರದ ಮಂತ್ರವು ಯಾರಲ್ಲಿಯೂ ಹೇಳದಿರು.

ಮನೋರಮೆಯು ತುಸು ಕೋಪದಿಂದ ಹೋಗು. ಸುಮ್ಮನಿರಿ ನಿನ್ನ ಮಾತನ್ನು ಸಹಜವಾದುದು, ದಿಟವಾದುದು ಎಂದೇ ತಿಳಿದೆನು. ಈ ರೀತಿಯ ಮೋಸದ ಮಾತು, ವ್ಯಂಗ್ಯದ ಮಾತು ಎಂಬುದನ್ನು ತಿಳಿಯದಾದೆನು. ನೀನು ಕವಿಯೋ, ಹಾಸ್ಯಗಾರನೋ ನಿನ್ನ ಈ ಕಾವ್ಯದ ಸೊಗಸನ್ನು ನಮ್ಮಂತಹವರಾದ ಬುದ್ಧಿಯಿಲ್ಲದ ಹೆಣ್ಣುಗಳೇ ಹೊಗಳುವರಲ್ಲದೆ ಬುದ್ಧಿವಂತರೇನು ಒಪ್ಪುವರೇ? ಎಂದು ಕೇಳುತ್ತಾಳೆ. ಆಗ ಮುದ್ದಣನು ಸಾಕು ಈ ಹಾಸ್ಯ, ವಿನೋದ ಮುಂದಿನ ಕತೆಯನ್ನು ಕೇಳು ಎಂದು ಕತೆ ಹೇಳಲು ಪ್ರಾರಂಭಿಸುತ್ತಾನೆ.

ಮುದ್ದಣನು ನನಗೂ ಒಂದು ಮಂತ್ರದ ಶಕ್ತಿ ಗೊತ್ತಿದೆ ಎಂದು ತಮಾಷೆ ಮಾಡುತ್ತಾನೆ. ಆಗ ಮನೋರಮೆ ಆಶ್ಚರ್ಯಗೊಂಡು ನಿಮ್ಮಂತಹವರಿಗೆ ಹಾಗಾದರೆ ಮಂತ್ರವು ಸಿದ್ಧಸಿರುವುದೇ? ಎಂದು ಪ್ರಶ್ನಿಸುತ್ತಾಳೆ. ಆಗ ಮುದ್ದಣನು ಅನುಮಾನವೇಕೆ, ಭಯವೇಕೆ. ಆಗಾದರೆ ನಿನ್ನಲ್ಲಿಯೂ ಇರುವುದೇ? ಹೌದು ನನ್ನಲ್ಲಿ ಅಂತಹದು ಹಾಸುಹೊಕ್ಕಾಗಿರುವುದು. ಆ! ನೀನು ಬಹಳ ಮಹಿಮಾಶಾಲಿ. ನಿನಗೆ ಯಾರ ದೆಸೆಯಿಂದ ಎಂದು ಉಪದೇಶವು ಆಯಿತು? ಎಂದು ಪ್ರಶ್ನಿಸುತ್ತಾಳೆ. ಗುರುವಿನ ದೆಸೆಯಿಂದ ಬಾಲಕನಾಗಿದ್ದಾಗಲೇ ಎಂದು ಹೇಳುತ್ತಾನೆ. ನನ್ನ ಜೊತೆಗಾರನೇ ಅದು ಯಾವುದೋ ಮಂತ್ರವು ನನ್ನಲ್ಲಿ ಹೇಳು? ಎಂದು ಕೇಳುತ್ತಾಳೆ.

ಎಲೆ ಹೆಣ್ಣೆ ನೀನೂ ಯಾರಲ್ಲಿಯೂ, ಎಂದೆಂದಿಗೂ ಹೇಳಬಾರದು ಎಚ್ಚರಿಕೆ. ಎಂದಾಗ ಎಂದೂ ಯಾವ ರೀತಿಯಲ್ಲೂ ಹೇಳುವುದಿಲ್ಲ. ಹಾಗಾದರೆ ಆ ಮಂತ್ರ ಈ ರೀತಿಯಿದೆ ಕೇಳು ಭ...ವ..ಬೇರೆಯವರಲ್ಲಿ ಹೇಳುವುದಿಲ್ಲ ಎಂಬ ನಂಬಿಕೆಯನ್ನು ಕೊಡು. ಎಂದು ಕೇಳಿದಾಗ ಮನೋರಮೆ ಇದೆ ಹಿಡಿ ಭರವಸೆಯನ್ನು ನಿನ್ನಾಣೆ, ಕುಲದೇವದಾಣಿ ಎಂದೂ ಬೇರೆಯವರಲ್ಲಿ ಹೇಳುವುದಿಲ್ಲ. ಎಂದು ಭರವಸೆಯನ್ನು ಕೊಟ್ಟಾಗ ಮುದ್ದಣನು **ಉಂ..ಭವತಿ...ಭಿ..ನೀನು ಯಾವ ರೀತಿಯಲ್ಲಿಯೂ, ಮರವಿನಲ್ಲೂ ಬೇರೆಯವರೊಡನೆ ಹೇಳಿ, ಗುಟ್ಟನ್ನು ಬಿಟ್ಟರೆ ನಮ್ಮಂತಹವರ ಬಾಳು ಹಾಳಾಗುವುದು. ಎಂದು ಎಚ್ಚರಿಕೆ ನೀಡುತ್ತಾನೆ. ಆಗ ಮನೋರಮೆ ನಾನೇನು ಬುದ್ಧಿಯಿಲ್ಲದವಳೇ, ಎಂದು ಹೇಳಿದಾಗ ಮುದ್ದಣನು ಗುಟ್ಟಿನಲ್ಲಿ 'ಭವತಿ ಭೀಕ್ಷಾಂ ದೇಹಿ' ಪೂಜ್ಯಳೇ ಭಿಕ್ಷೆ ಕೊಡು** ಎಂಬುದು ಇದುವೆ ಕವಿಗಳಿಗೆ ಸಿದ್ಧಿಸಿದ ಹೆಮ್ಮೆಯ ಏಳು ಅಕ್ಷರದ ಮಂತ್ರವು ಯಾರಲ್ಲಿಯೂ ಹೇಳದಿರು.

ಮುದ್ದಣ್ಣನಿಗೆ ಒಲಿದ ಮಂತ್ರದ ಮನೋರಮೆಗೆ ಸಮಾಧಾನವಾಗಿರಲಿಲ್ಲ. ಏಕೆಂದರೆ ಆ ಮಂತ್ರದಿಂದ ಊಟ–ಬಟ್ಟೆಯೂ ಸಿಗುವ ಸಂಭ್ರಮವಿರಲಿಲ್ಲ. ಏಕೆಂದರೆ ಆ ಮಂತ್ರದಿಂದ ಅವರ ಬಡತನವನ್ನು ಹೋಗಲಾಡಿಸಲಾರದೆಂದು ಪತಿಗೆ ಮೂದಲಿಸಿದರು. ನಿಮ್ಮ ಕಾವ್ಯವನ್ನು ನೀವೇ ಮೆಚ್ಚಿಕೊಳ್ಳಬೇಕು. ಜಾಣ

ಜಾಣೆಯರು ಕೊಂಡಾಡುವರು. ಆದರೆ ತಮ್ಮ ಕಾವ್ಯದ ಮಹಿಮೆಯಲ್ಲಿ ಕಾವ್ಯದ ಸೊಬಗಿನಲ್ಲಿ ಎಂಬುದಾಗಿ ಅಸಮಾಧಾನ ವ್ಯಕ್ತ ಪಡಿಸಿದರು.

## VII. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದಕ್ಕೆ ಹದಿನೈದು ವಾಕ್ಯಗಳಲ್ಲಿ ಪ್ರಬಂಧ ಬರೆಯಿರಿ. 1x5=5

21. ರಾಷ್ಟ್ರೀಯ ಹಬ್ಬಗಳ ಮಹತ್ವ

ಅಥವಾ

ಗ್ರಂಥಾಲಯದ ಮಹತ್ವ

**ಪೀಠಿಕೆ :** ಹಬ್ಬಗಳು ಸಡಗರ, ಸಂಭ್ರಮ ಸಂತೋಷದ ಸಂಕೇತಗಳಾಗಿವೆ. ಸಂಪ್ರದಾಯಿಕ ಹಬ್ಬಗಳು ರಾಷ್ಟ್ರೀಯ ಹಬ್ಬಗಳೆಂಬ ಎರಡು ವಿಧಗಳಿವೆ. ಒಂದು ಸೀಮಿತ ಪ್ರದೇಶದಲ್ಲಿ ಮಾತ್ರ ಆಚರಿಸುವ ಹಬ್ಬಗಳಿಗೆ ಸಂಪ್ರದಾಯಿಕ ಹಬ್ಬಗಳು. ದೇಶಾದ್ಯಂತ ಏಕ ಕಾಲದಲ್ಲಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು. ಭಾರತವು ವಿವಿಧ ಧರ್ಮಗಳ ನೆಲೆ ಬೀಡಾಗಿದೆ. ವೈವಿಧ್ಯಮಯ ಸಂಸ್ಕೃತಿ, ವಿವಿಧ ಧರ್ಮಗಳ ಹಲವು ಹಬ್ಬ – ಹರಿದಿನಗಳನ್ನು ಭಾರತದಲ್ಲಿ ಆಚರಿಸಲಾಗುತ್ತಿದೆ. ಸ್ವಾತಂತ್ರ್ಯ ದಿನಾಚರಣೆ. ಗಣರಾಜ್ಯೋತ್ಸವ, ಗಾಂಧೀಜಿ ಜಯಂತಿ, ಮಕ್ಕಳ ದಿನಾಚರಣೆ ಮುಂತಾದ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು.

**ವಿಷಯ ನಿರೂಪಣೆ :** ನಮ್ಮ ಭಾರತ ದೇಶದಲ್ಲಿ ಆಗಸ್ಟ್ 15 ರಂದು ಸ್ವಾತಂತ್ರ ದಿನಾಚರಣೆ, ಜನವರಿ 26ರಂದು ಗಣರಾಜ್ಯೋತ್ಸವ, ಅಕ್ಟೋಬರ್ 2 ರಂದು ಮಹಾತ್ಮ ಗಾಂಧೀಜಿ ಜಯಂತಿ, ನವಂಬರ್ 14 ರಂದು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿ, ಸೆಪ್ಟಂಬರ್ 5 ರಂದು ಶಿಕ್ಷಕರ ದಿನಾಚರಣೆ, ಏಪ್ರೀಲ್ 14 ರಂದು ಡಾ! ಬಿ ಆರ್ ಅಂಬೇಡ್ಕರ್ ಜಯಂತಿ ಮೊದಲಾದ ದಿನಗಳನ್ನು ರಾಷ್ಟ್ರೀಯ ಹಬ್ಬಗಳೆಂದು ಆಚರಿಸಲಾಗುತ್ತಿದೆ. ದೇಶದಾದ್ಯಂತ ಏಕ ಕಾಲದಲ್ಲಿ ನಾವೆಲ್ಲರೂ ಒಂದೆ ಎಂಬ ಭಾವನೆ ಇಂದ ಆಚರಿಸುವ ಹಬ್ಬಗಳಿವು. ನಮ್ಮ ದೇಶದ ಸ್ವಾತಂತ್ರಕ್ಕಾಗಿ ಹೋರಾಡಿ ಮಡಿದವರನ್ನು ಸ್ಮರಿಸುವ ಸುದಿನಗಳಿವು. ದೇಶದ ರಕ್ಷಣೆಗಾಗಿ ಏಳಿಗೆಗಾಗಿ ದುಡಿದು ಮಡಿದ ಮಹನೀಯರನ್ನು ಸ್ಮರಿಸಲು, ಹಿರಿಯರ ತ್ಯಾಗ ಬಲಿದಾನಗಳನ್ನು, ನೋವು ಅವಮಾನಗಳನ್ನು ತಿಳಿಸುವ ದಿನ. ಈ ಹಬ್ಬಗಳಲ್ಲಿ ಭಾಗವಹಿಸುವುದರಿಂದ ಮಕ್ಕಳಲ್ಲಿ ಬೇಧಬಾವನೆ ಮರೆಯಾಗಿ ನಾವೆಲ್ಲ ಒಂದೆ ಎಂಬ ಭಾವನೆ ಮೂಡಲು ಸಹಾಯಕವಾಗುತ್ತದೆ. ದೇಶಪ್ರೇಮ, ದೇಶಾಭಿಮಾನ ಬೆಳೆಸಲು ಸಹಕಾರಿ. ದೇಶದ ಹಿರಿಮೆ ಗರಿಮೆ ತಿಳಿದು ಗೌರವ ಮೂಡುವಂತೆ ಮಾಡಲು ಸಹಕಾರಿ. ರಾಷ್ಟ್ರಿಯ ಹಬ್ಬಗಳು ಕೇವಲ ಶಾಲಾಕಾಲೇಜಿನಲ್ಲಿ, ಸರ್ಕಾರಿ ಕಛೇರಿಗಳಲ್ಲಿ ಆಚರಿಸುವ ಹಬ್ಬಗಳಾಗದೆ, ಪ್ರತಿ ಮನೆ, ಗ್ರಾಮ, ನಗರಗಳಲ್ಲಿ ಜಾತಿ, ಮತ, ಧರ್ಮ, ಪಂತಗಳನ್ನು ಮರೆತು ಆಚರಿಸಬೇಕು. ಆಗ ಮಾತ್ರವೇ ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡಲು ಸಾಧ್ಯವಾಗುತ್ತದೆ.

**ಉಪಸಂಹಾರ :** ಒಂದೆಡೆ ಸೇರಿ ಈ ಹಬ್ಬಗಳನ್ನು ಆಚರಿಸಬೇಕು. ಕಾಲು ಎರಡು ತುಳಿಯುವ ದಾರಿಯೊಂದು ಎಂಬಂತೆ ಕೂಡಿ ಬಾಳಿದರೆ ಸ್ವರ್ಗ ಸುಖವೆಂಬಂತೆ. ಪ್ರತಿ ಮನೆಮನೆಗಳಲ್ಲೂ ಹಬ್ಬದ ಸಂಭ್ರಮವಿರಬೇಕು. ನಾವು ಆಚರಿಸುವ ದಿನಗಳ ಮಹತ್ವ ತಿಳಿಯಬೇಕು. ರಾಷ್ಟ್ರಿಯ ಹಬ್ಬಗಳ ದಿನ ರಜಾ ಸರ್ಕಾರಿ ರಜಾ ದಿನಾ ಎಂಬ ಭಾವನೆ ಮನಸ್ಸಿಂದ ದೂರ ಮಾಡಬೇಕು. ಭಕ್ತಿ ಭಾವದಿಂದ ಈ ಹಬ್ಬಗಳ ಆಚರಣೆಯಲ್ಲಿ ತೊಡಗಬೇಕು. ನಾವೆಲ್ಲರೂ ಒಂದೇ ನನ್ನ ದೇಶ ಭಾರತ. ನನ್ನ ತಾಯಿ ಭಾರತಾಂಬೆ ನಾವೆಲ್ಲರೂ ಒಂದೆ ತಾಯ ಮಕ್ಕಳು ಎಂಬ ವಿಶಾಲ ಭಾವನೆ ಈ ಹಬ್ಬಗಳಿಂದ ಮೂಡುತ್ತದೆ ಎಂಬ ಅಭಿಪ್ರಾಯ ನನ್ನದು.